ಟಿಫಿನ್ ಮಾಡಿ' ಎಂದು ಹೇಳಿದರು.

ಭುವನಪ್ರಸಾದರೂ ನಂದಕಿಶೋರನೂ ಒಂದು ಟೇಬಲಿನತ್ತ ಹೋಗಿ ಇಡ್ಲಿ ವಡೆ ಸಾಂಬಾರ್ ತಿಂದು ಕಾಫಿ ಕುಡಿದರು. ಮತ್ತೆ ಸ್ವಲ್ಪ ಹಿಂಜರಿಕೆಯಿಂದಲೇ ರಾಯರ ಬಳಿಗೆ ಬಂದರು.

ನಂದಕಿಶೋರ, 'ನಾನು ಕೆಲಸ ಮಾಡುತ್ತೇನೆ' ಎಂದು ಮೆತ್ತಗಿನ ಸ್ವರದಲ್ಲಿ ಅಂಜುತ್ತಾ ಹೇಳಿದ.

ರಾಯರು, 'ನಾನು ನಿನಗೆ ಕೆಲಸ ಮಾಡಲಿಕ್ಕೆ ಹೇಳಿದೆನೋ? ನೀನು ಸರಿಯಾಗಿ ಕಲಿಯಬೇಕು. ಹೋಗು ಒಳಗೆ' ಎಂದು ಕೈತೋರಿಸಿದರು. ಭುವನಪ್ರಸಾದರ ಮುಖದಲ್ಲಿ ಕೃತಜ್ಞತೆಯ ಮುಗುಳ್ನಗು ಅರಳಿತು. ರಾಯರಿಗೆ ಕೈಮುಗಿದರು. ನಂದಕಿಶೋರ ತನ್ನ ಬಟ್ಟೆಬರೆಯಿದ್ದ ಚೀಲ ಎತ್ತಿಕೊಂಡು ಒಳಗೆ ನಡೆದ.

ರಾಮಚಂದ್ರ ರಾಯರು ತುಂಬಾ ಗಂಭೀರ ವ್ಯಕ್ತಿಯಾದರೂ ಬಹಳ ಉದಾತ್ತ ಮನುಷ್ಯ. ನಂದಕಿಶೋರನಿಗೆ ಊಟ, ವಸತಿ ಕೊಟ್ಟದ್ದಕ್ಕಷ್ಟೆ ಈ ಮಾತು ಹೇಳಿದ್ದಲ್ಲ. ಅವರ ಹೋಟೆಲಿಗೆ ಶುಕ್ರವಾರ ವಾರದ ರಜೆ ಇತ್ತು. ನಂದಕಿಶೋರ ಅವರಲ್ಲಿ ಆಶ್ರಯ ಪಡೆದ ಮೊದಲನೆಯ ಗುರುವಾರ ಸಂಜೆ ರಾಯರು ನಂದಕಿಶೋರರನ್ನು ಕರೆದು,'ನಾಳೆ ನಮ್ಮ ಹೋಟೆಲಿಗೆ ರಜೆ ಅಲ್ವಾ ಹುಡುಗ? ಊಟ ತಿಂಡಿಗೆ ಏನು ಮಾಡುತ್ತಿ?' ಎಂದು ಕೇಳಿದರು.

ಅವನು ಸುಮ್ಮನೆ ನಿಂತ. ಏನು ಮಾಡುವುದೆಂದು ಅವನಿಗೂ ಗೊತ್ತಿರಲಿಲ್ಲ. ಉಪವಾಸ ಇರಬೇಕಷ್ಟೆ.

'ಬಾ ನನ್ನ ಜೊತೆಗೆ' ಎಂದು ರಾಯರು ತಮ್ಮ ಫಿಯಟ್ ಕಾರಲ್ಲಿ ನಂದಕಿಶೋರನನ್ನು ಕೂರಿಸಿಕೊಂಡು ಶಿವರಾಮಪೇಟೆಗೆ ಕಾರುಬಿಟ್ಟರು. ಅಲ್ಲಿ ಆಗ 'ರಾಘವೇಂದ್ರ ಭವನ' ಎನ್ನುವ ಹೋಟೆಲಿತ್ತು. ಒಳಗೆ ಹೋದಾಗ ಅಲ್ಲಿನ ಧನಿ ವರದರಾಜ ರಾಯರು ಕುರ್ಚಿಯಿಂದ ಎದ್ದು ರಾಮಚಂದ್ರ ರಾಯರಿಗೆ ವಂದಿಸಿದರು. ರಾಮಚಂದ್ರ ರಾಯರು ಅವರ ಬೆನ್ನು ಸವರಿ, ಹೋಟೆಲಿನ ಒಳಗೆ ಹೊರಗೆ ಹೆಜ್ಜೆ ಹಾಕಿದರು. ನಂತರ ಒಂದು ಕುರ್ಚಿಯಲ್ಲಿ ಕುಳಿತು, ವರದರಾಜ ರಾಯರು ತರಿಸಿಕೊಟ್ಟ ಕಾಫಿಯನ್ನು ಹೀರಿದ ನಂತರ ಎದುರು ಕುಳಿತಿದ್ದ ರಾಯರಿಗೆ ಹೇಳಿದರು:

'ನೋಡು ವರದ, ಈ ಹುಡುಗ ಎಂ.ಎ ಕಲಿಯಲಿಕ್ಕೆ ಬಂದಿದ್ದಾನೆ, ಬಡವ. ಆರು ದಿನ ನಾನು ಇವನಿಗೆ ಊಟ ಹಾಕುತ್ತಿದ್ದೇನೆ. ಶುಕ್ರವಾರ ನಮ್ಮಲ್ಲಿ ರಜೆ. ಆ ದಿನ ನೀನು ಇವನಿಗೆ ಊಟ- ತಿಂಡಿ ಕೊಡಬೇಕು' ಎಂದು ಆದೇಶ ಮಾಡುವವರಂತೆ ಹೇಳಿಬಿಟ್ಟರು. ಹೋಟೆಲ್ ಮಾಲಕ ವರದರಾಜ ರಾಯರು ಮರುಮಾತಾಡದೆ ಒಪ್ಪಿಕೊಂಡರು.

'ಖಂಡಿತಾ ಬರಲಿ' ಎಂದರು.

ಹಾಗೆ ನಂದಕಿಶೋರ ಮೈಸೂರಿನಲ್ಲಿ ಎಂ.ಎ ಪದವಿ ಪಡೆದದ್ದು, ನಂತರ ಉಪನ್ಯಾಸಕನಾಗಿ ಕೆಲಸ ಗಳಿಸಿಕೊಂಡದ್ದು. ರಾಮಚಂದ್ರ ರಾಯರು, ನಂದಕಿಶೋರನನ್ನು ಕೆಲಸಕ್ಕೆ ಬಳಸಿಕೊಳ್ಳಬಾರದು ಎಂದು ಬೇರೆ ಕೆಲಸಗಾರರಿಗೆ ಹೇಳಿದ್ದರು. ಆದರೂ ನಂದಕಿಶೋರ ಹೋಟೆಲಿನಲ್ಲಿ ಗಿರಾಕಿಗಳ ಒತ್ತಡ ಇದ್ದಾಗ ಸಪ್ಲಯರ್‌ಗಳಿಗೋ, ಚೀಟಿ ಬರೆಯುವವರಿಗೋ ಸಹಾಯ ಮಾಡಲು ಸೇರಿ ಕೊಳ್ಳುತ್ತಿದ್ದ.

ರಾಯರ ಮಗ ರಾಜಗೋಪಾಲ ಆಗ ಪಿಯುಸಿಯಲ್ಲಿ ಓದುತ್ತಿದ್ದ. ಆಗಾಗ ಟಿಫಿನ್ ಮಾಡಲು ಹೋಟೆಲಿಗೆ ಬರುತ್ತಿದ್ದ, ಅವನ ಪರಿಚಯ ನಂದಕಿಶೋರನಿಗೆ ಅಷ್ಟೇ ಇದ್ದದ್ದು.

ಎಂ.ಎ ಮುಗಿಸಿ ಉಪನ್ಯಾಸಕನಾಗಿ ಕೆಲಸಕ್ಕೆ ಸೇರಿದ ಮೇಲೆ ನಂದಕಿಶೋರ ಒಮ್ಮೆ ಮೈಸೂರಿಗೆ ಹೋದಾಗ 'ಕೃಷ್ಣವಿಲಾಸ'ಕ್ಕೆ ಹೋಗಿ ರಾಯರ ಆಶೀರ್ವಾದ ತೆಗೆದುಕೊಂಡು ಬಂದದ್ದಿತ್ತು. ಆಮೇಲೆ ಅವರ ಸಂಪರ್ಕ ಇರಲಿಲ್ಲ. ಎರಡು ತಿಂಗಳ ಹಿಂದೆ ಉಡುಪಿಯಲ್ಲಿ ಕೆಮುಂಡೆಲಿನ ನಾರಾಯಣ ತಂತ್ರಿಗಳು ಎದುರು ಸಿಕ್ಕಿದ್ದರು. ಹೀಗೆಯೇ ಉಭಯ ಕುಶಲೋಪರಿ ಮಾತಾಡುತ್ತಿದ್ದಾಗ ನಂದಕಿಶೋರ ಕೇಳಿದ, 'ಕೆಮುಂಡೇಲಿನ ರಾಮಚಂದ್ರ ರಾಯರ ಮನೆಯಲ್ಲಿ ಈಗ ಯಾರಿದ್ದಾರೆ? ನಾನು ಮೈಸೂರಿನಲ್ಲಿ ಕಲಿಯುತ್ತಿದ್ದಾಗ ಅವರು ಎರಡು ವರ್ಷ ಧರ್ಮಾರ್ಥವಾಗಿ ನನಗೆ ಊಟ, ವಸತಿ ಕೊಟ್ಟಿದ್ದರು ಮಾರಾಯರೆ, ದೇವರಂಥ ಮನುಷ್ಯ...'

'ಓ ಕೃಷ್ಣವಿಲಾಸ ರಾಮರಾಯರೋ? ಅವರು ಪೂರ್ತಿ ಲಾಸಾಗಿ, ಹೋಟೆಲ್ ಮುಚ್ಚಿ ಈಗ ಊರಲ್ಲಿಯೇ ಇದ್ದಾರಲ್ಲ. ಅವರಿಗೆ ಆರೋಗ್ಯವೂ ಸರಿಯಿಲ್ಲ. ಪ್ರಾಯವೂ ಆಯಿತಲ್ಲ! ಹೊರಗೆ ಎಲ್ಲಿಯೂ ಓಡಾಡುತ್ತಾ ಇಲ್ಲ ಅವರು. ನನಗೆ ಅವರ ಮನೆಯ